## ಅಧ್ಯಾಯ-೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯು ಅಸ್ತಿತ್ವಕ್ಕೆ ಬರುವ ಮೊದಲು, ಲೇವಾದೇವಿ ಪದ್ಧತಿಯು ಇತರೆಡೆಗಳಂತೆ ತಾಲೂಕಿನಲ್ಲೂ ರೂಢಿಯಲ್ಲಿತ್ತು. ತಾಲೂಕು ಕೇಂದ್ರ ಹೆಗ್ಗಡದೇವನಕೋಟೆಯೂ ಸೇರಿದಂತೆ, ಸರಗೂರು, ಅಂತರಸಂತೆ, ಕಿತ್ತೂರು, ಕೆ.ಬೆಳ್ತೂರು, ಕೊಳಗಾಲ, ಮಾದಾಪುರ, ಹೆಬ್ಬಲಕುಪ್ಪೆ ಮುಂತಾದ ಊರುಗಳಲ್ಲಿದ್ದ ಸಾಹುಕಾರರು, ಜಮೀನ್ದಾರರು ಹಾಗೂ ವರ್ತಕರು ಲೇವಾದೇವಿಯಲ್ಲಿ ತೊಡಗಿದ್ದು, ಧರ್ಮಬಡ್ಡಿಗೆ ಅಲ್ಪಮೊತ್ತವನ್ನು ಅಲ್ಪಾವಧಿಗೆ ಸಾಲ ನೀಡುತ್ತಿದ್ದರೂ, ಸಾಲದ ಮೊತ್ತ ದೊಡ್ಡದಾದಲ್ಲಿ ಅದಕ್ಕೆ ಒಡವೆ, ಜಮೀನು ಮುಂತಾದವನ್ನು ಅಡಮಾನವಿಟ್ಟುಕೊಳ್ಳುತ್ತಿದ್ದರು. ಆಗಾಗ ಎದುರಾಗುತ್ತಿದ್ದ ಅತಿವೃಷ್ಠಿ ಅನಾವೃಷ್ಟಿಗಳಿಂದಾಗಿ ಸಂಕಷ್ಟ ಪರಿಸ್ಥಿತಿ ಉಂಟಾಗಿ ಸಾಲದ ಸುಳಿಯಲ್ಲಿ ಸಿಲುಕಿ ಬಡ್ಡಿ ಚಕ್ರಬಡ್ಡಿಗಳ ವಿಷವರ್ತುಲದಲ್ಲಿ ರೈತರು ತೊಳಲಾಡಬೇಕಾಗುತ್ತಿತ್ತು. ಇದು ಕೆಲವೊಮ್ಮೆ ಪಡೆದ ಹಣ ಹಿಂತಿರುಗಿಸಲಾಗದ ಕೆಳವರ್ಗದ ಸಾಲಗಾರರನ್ನು ಜೀತದಾಳುಗಳಾಗುವಂತೆ ಮಾಡುತ್ತಿತ್ತು. ವ್ಯಾಪಾರಿಗಳು ಕುಶಲಕರ್ಮಿಗಳ ಸಂಘಗಳು, ದೇವಾಲಯಗಳು ಹಣವನ್ನು ಠೇವಣಿಯನ್ನಾಗಿ ಇಟ್ಟುಕೊಳ್ಳುವುದರ ಜೊತೆಗೆ ನಂಬಲರ್ಹರಿಗೆ ಸಾಲ ನೀಡುವ ಮೂಲಕ ಬಂದ ಬಡ್ಡಿಯನ್ನು ದೇವರ ಪೂಜೆ, ಧರ್ಮಸತ್ರ ನಿರ್ವಹಣೆ ಮುಂತಾದ ಧರ್ಮಕಾರ್ಯಗಳಿಗೆ ವಿನಿಯೋಗಿಸುತ್ತಿದ್ದ ಅಂಶವೂ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ತಾಲೂಕಿನ ಶಾಸನಗಳಲ್ಲಿ ಗದ್ಯಾಣಕ್ಕೆ ತಿಂಗಳಿಗೆ ಒಂದು ಹಾಗ ಬಡ್ಡಿ ಬರುತ್ತಿದ್ದ ಅಂಶ ದಾಖಲಾಗಿದ್ದು, ಆ ದಿನಗಳಲ್ಲಿ ಇದ್ದ ಶೇ. ೨೦ ವಾರ್ಷಿಕ ಬಡ್ಡಿದರವನ್ನು ಇದು ಸೂಚಿಸುತ್ತದೆ.

ಸುಮಾರು ೧೯೦೦ರ ವೇಳೆಗೆ ಶೇ. ೧೨ ರಿಂದ ಶೇ. ೩೦ರವರೆಗೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ಸಾಲಿಗರು ಲೇವಾದೇವಿದಾರನ ಕಪಿಮುಷ್ಟಿಯಲ್ಲಿ ಬಳಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದನ್ನು ಮೊದಲೇ ಮನಗಂಡಿದ್ದ ಸರ್ಕಾರ ಕಮೀಷನರುಗಳ ಆಡಳಿತಾವಧಿಯಲ್ಲಿ ತಕಾವಿ ಸಾಲ ಕಾಯ್ದೆ (೧೮೭೬), ಡೆಕ್ಕನ್ ರೈತ ಪರಿಹಾರ ಕಾಯ್ದೆ (೧೮೭೯) ಭೂ ಸುಧಾರಣಾ ಸಾಲ ಕಾಯ್ದೆ (೧೮೮೩) ರೈತ ಸಾಲ

ಕಾಯ್ದೆ (೧೮೮೪) ಹಾಗೂ ಭೂಅಭಿವೃದ್ಧಿ ಸಾಲ ಕಾಯ್ದೆ (೧೮೯೦)ಗಳನ್ನು ಜಾರಿಗೊಳಿಸಿತಾದರೂ ಇವು ತಾಲೂಕಿನಲ್ಲಿ ಬೀರಿದ ಪ್ರಭಾವ ಅಷ್ಟಕ್ಕಷ್ಟೇ. ಆಗ ತಾಲೂಕು ಮಟ್ಟದಲ್ಲಿ ರೈತರಿಗೆ ರೂ.೨೫೦ರವರೆಗೆ ತಕಾವಿ ಸಾಲ ನೀಡಲು ಅಧಿಕಾರವಿದ್ದು, ಮರು ಪಾವತಿಸಲು ಒಂದರಿಂದ ಹತ್ತು ವರ್ಷ ಕಾಲಾವಕಾಶವನ್ನು ನೀಡಲಾಗುತ್ತಿತ್ತು. ಅದೇ ಭೂಅಭಿವೃದ್ಧಿ ಸಾಲವನ್ನು ಸಾಲ ಉದ್ದೇಶವನ್ನಾಧರಿಸಿ ಮರುಪಾವತಿ ಅವಧಿಯನ್ನು ೧೦ ರಿಂದ ೩೦ ವರ್ಷದವರೆಗೆ ನೀಡಲಾಗುತ್ತಿತ್ತು. ಆದರೆ ಈ ಸಾಲಗಳನ್ನು ನರಸೀಪುರ ತಾಲೂಕಿನಲ್ಲಿ ಪಡೆದವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು, ಸಂಸ್ಥಾನದಲ್ಲಿ ೧೯೨೩-೩೯ರ ಅವಧಿಯಲ್ಲಿ ಲೇವಾದೇವಿದಾರರ ಚಟುವಟಿಕೆಗಳನ್ನು ನಿಯಂತ್ರಿಸುವ ನಾಲ್ಕಾರು ಕಾಯ್ದೆಗಳು ಜಾರಿಗೆ ಬಂದು ಸಾಲಗಾರರು ಉಸಿರಾಡುವಂತಾಯಿತು. ಬಡ್ಡಿದರವನ್ನು ಆಧಾರ ಸಾಲಕ್ಕೆ ಶೇ.೯ ಹಾಗೂ ಆಧಾರರಹಿತ ಸಾಲಕ್ಕೆ ಶೇ ೧೨ಕ್ಕೆ ನಿಗದಿಪಡಿಸಲಾಯಿತು. ಈ ಕಾಯ್ದೆಗಳನ್ನು ಮುರಿದ ಲೇವಾದೇವಿದಾರರು ಶಿಕ್ಷಾರ್ಹರಾಗುತ್ತಿದ್ದರು.

ಏಕೀಕರಣದ ನಂತರ ಅಸ್ತಿತ್ವಕ್ಕೆ ಬಂದ ಕರ್ನಾಟಕ ಲೇವಾದೇವಿದಾರರ ಕಾಯ್ದೆ (೧೯೬೧) ಹಾಗೂ ಕರ್ನಾಟಕ ಗಿರವಿದಾರರ ಕಾಯ್ದೆ (೧೯೬೧) ಗಳು ಕ್ರಮವಾಗಿ ೧೯೬೨ ಹಾಗೂ ೧೯೬೬ರಲ್ಲಿ ಜಾರಿಗೊಂಡವು. ಇವು ಸಾಲಗಾರರಿಗೆ ರಕ್ಷಣೆ ನೀಡಿದವಾದರೂ, ಒತ್ತೆ ಸಾಲಕ್ಕೆ ಶೇ.೧೮ ಹಾಗೂ ಒತ್ತೆರಹಿತ ಸಾಲಕ್ಕೆ ಶೇ. ೨೧ ಬಡ್ಡಿದರವನ್ನು ನಿಗದಿಪಡಿಸಿದ್ದವು. ಮುಂದೆ ೧೯೭೬ರಲ್ಲಿ ಜಾರಿಗೆ ಬಂದ ಕರ್ನಾಟಕ ಋಣ ಪರಿಹಾರ ಕಾಯ್ದೆಯ ಪ್ರಕಾರ ಜೀತಪದ್ಧತಿಯಿಂದ ಮುಕ್ತರಾದ ಜೀತದಾಳುಗಳು ಹಾಗೂ ರೂ. ೨,೪೦೦ ಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು (ಇದನ್ನು ೧೯೭೯ರಲ್ಲಿ ೪,೮೦೦ ರೂ.ಗಳಿಗೆ ನಿಗದಿಪಡಿಸಲಾಯಿತು) ಹೊಂದಿರುವ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಸಾಲಗಾರರ ಅಸಲು ಬಡ್ಡಿಗಳನ್ನು ಮನ್ನಾ ಮಾಡಿದ್ದು, ಶತಮಾನಗಳಿಂದ ಬಳಲುತ್ತಿದ್ದ ದುರ್ಬಲವರ್ಗದವರಿಗೆ ವರವಾಯಿತು. ಆದರೆ ಈ ಪರಿಹಾರ, ಕೇಂದ್ರ-ರಾಜ್ಯ ಸರ್ಕಾರ ಹಾಗೂ ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲಗಳಿಗೆ ಅನ್ವಯಿಸುತ್ತಿರಲಿಲ್ಲ. ಈ ಕಾಯ್ದೆ ಜಾರಿಗೊಂಡಂದಿನಿಂದ ೧೯೮೬ರವರೆಗೆ ಜಿಲ್ಲೆಯಲ್ಲಿ ಸ್ವೀಕರಿಸಲ್ಪಟ್ಟಿದ್ದ ೨೮,೨೩೩ ಋಣ ಪರಿಹಾರ ಅರ್ಜಿಗಳಲ್ಲಿ ಹೆಗ್ಗಡದೇವನಕೋಟೆ ತಾಲೂಕಿನಿಂದ ಅತ್ಯಂತ ಕಡಿಮೆ, ಅಂದರೆ ಕೇವಲ ೫೯೧ ಅರ್ಜಿಗಳು ಸಲ್ಲಿಸಲ್ಪಟ್ಟಿದ್ದು ಗಮನಾರ್ಹವಾಗಿತ್ತು. ಆರಂಭದಲ್ಲಿ ಲೇವಾದೇವಿದಾರರು ವಿಧಿಸಬಹುದಾದ ಬಡ್ಡಿದರವನ್ನು ೧೯೯೨ರಲ್ಲಿ ಆಧಾರಿತ ಸಾಲಕ್ಕೆ ಶೇ.೨೧ ಹಾಗೂ ಆಧಾರರಹಿತ ಸಾಲಕ್ಕೆ ಶೇ.೨೩ಕ್ಕೂ ನಿಗದಿಪಡಿಸಿದ್ದ ಸರ್ಕಾರ ಅದನ್ನು ೨೦೦೩ರಲ್ಲಿ ಪುನರ್‌ಪರಿಷ್ಕರಿಸಿ ಬಡ್ಡಿದರವನ್ನು ಕ್ರಮವಾಗಿ ಶೇ.೧೪ ಹಾಗೂ ಶೇ.೧೬ ಎಂದು ನಿಗದಿಪಡಿಸಿದೆ. ಆದರೂ ಖಾಸಗಿ ಲೇವಾದೇವಿದಾರರು, ಸಾಹುಕಾರರು, ವ್ಯಾಪಾರಿಗಳು, ಪರವಾನಗಿ ಇಲ್ಲದೇ ರಹಸ್ಯವಾಗಿ ಸಾಲ ನೀಡಿ ದುಬಾರಿ ಬಡ್ಡಿ ವಿಧಿಸುತ್ತಿದ್ದು, ಚೀಟಿ ವ್ಯವಹಾರದಲ್ಲಿ ಸಾಕಷ್ಟು ಮೋಸ ವಂಚನೆ ಪ್ರಕರಣಗಳು ವರದಿಯಾಗಿವೆ.

ಹಣಕಾಸು ವ್ಯವಹಾರದಲ್ಲಿ ಖಾಸಗಿ ಲೇವಾದೇವಿಗಾರರು ಗಿರವಿದಾರರ ಜೊತೆಗೆ ಬ್ಯಾಂಕೇತರ ಹಣಕಾಸು ಸಂಸ್ಥೆ ಹಾಗೂ ಚಿಟ್‌ಫಂಡ್ ಸಂಸ್ಥೆಗಳು ತಾಲೂಕು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. ೧೯೩೨ ಹಾಗೂ ೧೯೫೬ರ ಕಾಯ್ದೆಯನ್ವಯ ನೋಂದಾಯಿತಗೊಳ್ಳುವ ಈ ಹಣಕಾಸು ಸಂಸ್ಥೆಗಳು ಸಣ್ಣ ಪ್ರಮಾಣದ ವ್ಯಾಪಾರಿಗಳೂ ಸೇರಿದಂತೆ ಸಮಾಜದ ವಿವಿಧ ವರ್ಗದವರಿಗೆ ಸಾಲ ನೀಡುವುದರ ಜೊತೆಗೆ ಠೇವಣಿಯನ್ನೂ ಸಂಗ್ರಹಿಸುತ್ತವೆ. ತಾಲೂಕಿನಲ್ಲಿ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್ನಿನ ಶಾಖೆಯೂ ಸೇರಿದಂತೆ ಹಲವಾರು ಖಾಸಗಿ ಹಣಕಾಸು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಸಹಕಾರ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿವೆ.

ಪ್ರಾಚೀನ ಕಾಲದಲ್ಲಿ ವ್ಯವಹಾರ ಮಾಡಲು ಗ್ರಾಮೀಣ ಪ್ರದೇಶದ ಜನರು ತಾವು ಬೆಳೆಯುತ್ತಿದ್ದ ದವಸ–ಧಾನ್ಯ, ಸಾಕುತ್ತಿದ್ದ ದನಕರು ಮೊದಲಾದುವುಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ತಮ್ಮ ಅಗತ್ಯಗಳನ್ನು ಸರಿದೂಗಿಸಿಕೊಳ್ಳುತ್ತಿದ್ದರು. ರೈತರು ತಮ್ಮ ಸಂಪಾದನೆಯ ಮೂಲಕ ಹಣವನ್ನು ಸಂಗ್ರಹಿಸಿ ಅದನ್ನು ತಮ್ಮ ತಮ್ಮಲ್ಲಿಯೇ ತಮ್ಮ ಜೀವನ ಸುಧಾರಣೆಗೆ ಹಾಗೂ ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದು, ಅತಿವೃಷ್ಟಿ, ಅನಾವೃಷ್ಟಿಗಳಲ್ಲಿ ಆರ್ಥಿಕ ಸಂಕಷ್ಟಕ್ಕೆ ಒಳಗಾದಾಗ ಸಾಹುಕಾರರು, ಜಮೀನ್ದಾರರು ಹಾಗೂ ಲೇವಾದೇವಿಗಾರರನ್ನು ಹೆಚ್ಚಾಗಿ ಆಶ್ರಯಿಸಬೇಕಾಗುತ್ತಿತ್ತು. ಅಲ್ಲದೆ, ವ್ಯವಸಾಯಕ್ಕೆ, ವ್ಯಾಪಾರ ವಾಣಿಜ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಸಾಲಸೌಲಭ್ಯವನ್ನು ಒದಗಿಸುವ ಪದ್ಧತಿ ಪ್ರಾಚೀನಕಾಲದಿಂದಲೂ ರೂಢಿಯಲ್ಲಿತ್ತು. ಗ್ರಾಮೀಣ ಪ್ರದೇಶದ ರೈತರು ತಮಗೆ ಬೇಕಾದ ಹಣವನ್ನು ಶ್ರೀಮಂತರಿಂದ ಸಾಮಾನ್ಯ ಬಡ್ಡಿದರದಲ್ಲಿ ಸಾಲರೂಪದಲ್ಲಿ ಪಡೆಯುತ್ತಿದ್ದರು. ಅದಕ್ಕಾಗಿ ಸ್ಥಿರ ಹಾಗೂ ಚರ ಆಸ್ತಿಗಳನ್ನು ಅವರ ಬಳಿ ಒತ್ತೆ ಇಡುತ್ತಿದ್ದರು. ಅನೇಕ ಸಲ ರೈತರು ತಾವು ಪಡೆದ ಸಾಲವನ್ನು ತೀರಿಸಲಾಗದೆ ಬಡ್ಡಿಗೆ ಬಡ್ಡಿ ಸೇರಿ ತಮ್ಮ ಸ್ಥಿರ ಮತ್ತು ಚರ ಆಸ್ತಿಗಳನ್ನು ಕಳೆದುಕೊಳ್ಳುತ್ತಿದ್ದುದೂ ಉಂಟು. ಹಬ್ಬ–ಹರಿದಿನ, ಮದುವೆ–ಮುಂಜಿ ಮೊದಲಾದ ಅನುತ್ಪಾದಕ ಬಾಬ್ತುಗಳಿಗೆ ರೈತರು ಸಾಲ ಮಾಡಬೇಕಾದ ಅನಿವಾರ್ಯತೆ ಉಂಟಾಗುತ್ತಿದ್ದು, ಸಾವು–ನೋವು, ರೋಗ–ರುಜಿನ, ಕ್ಷಾಮ ಮೊದಲಾದುವುಗಳು ರೈತರು ಸಾಲಗಾರರಾಗಲು ಹೆಚ್ಚು ಕಾರಣವಾಗುತ್ತಿದ್ದವು. ಇದಕ್ಕೆ ಪರಿಹಾರವಾಗಿ ಸರ್ಕಾರ ತಕಾವಿ ಸಾಲವನ್ನು ರೈತರಿಗೆ ನೀಡಲು ಮುಂದಾಯಿತು. ೧೯೬೧ರ ಲೇವಾದೇವಿ ಕಾಯ್ದೆಯಂತೆ ಶೇ.೯ರಷ್ಟು ಅಡಮಾನ ಸಾಲಕ್ಕೂ ಶೇ. ೧೨ರಷ್ಟು ಆಧಾರ ರಹಿತ ಸಾಲಕ್ಕೂ ಬಡ್ಡಿದರವಾಯಿತು.

ಬುಡಕಟ್ಟು ಕುಟುಂಬಗಳಲ್ಲಿನ ಋಣಗ್ರಸ್ಥತೆ ಪ್ರಮಾಣವನ್ನು ಅರಿಯಲು ೧೯೭೪ರಲ್ಲಿ ಸಮಾಜಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ನಿರ್ದೇಶನಾಲಯವು ಕೈಗೊಂಡ ಸರ್ವೇಕ್ಷಣದಲ್ಲಿ ತಾಲೂಕಿನ ಬನ್ನೂರುಗದ್ದೆ ಹಾಗೂ ಮಾಚೂರುಗಳಲ್ಲಿನ ಕುಟುಂಬಗಳ ವಾರ್ಷಿಕ ಆದಾಯ ರೂ. ೨೦೦–೧೨೦೦ ಇದ್ದು, ಬನ್ನೂರು ಗದ್ದೆಯಲ್ಲಿ ರೂ. ೬೨೨ ಹಾಗೂ ಮಾಚೂರಿನಲ್ಲಿ ರೂ. ೭೯೦ ವಾರ್ಷಿಕ ಆದಾಯವಿದ್ದು, ಅವರಿಗೆ ಸ್ಥಿರಾಸ್ತಿ ಇಲ್ಲದ್ದರಿಂದ ಸಾಲ ದೊರೆಯಲಿಲ್ಲವೆಂದು ತಿಳಿದು ಬರುತ್ತದೆ.

**ವಾಣಿಜ್ಯ ಬ್ಯಾಂಕುಗಳು :** ಆಧುನಿಕ ಯುಗದಲ್ಲಿ ಬ್ಯಾಂಕಿಂಗ್ ಸೇವೆ ಸಮಾಜೋ–ಆರ್ಥಿಕ ರಂಗದಲ್ಲಿ ಹಿರಿದಾದ ಪಾತ್ರ ವಹಿಸುತ್ತಿದೆ. ಠೇವಣಿ ಸಂಗ್ರಹ ಹಾಗೂ ವಿವಿಧ ಕ್ಷೇತ್ರದ ಉದ್ಯಮಿಗಳಿಗೆ ಸಾಲ ನೀಡುವ ಮೂಲಕ ಸರ್ಕಾರದ ೨೦ ಅಂಶ ಕಾರ್ಯಕ್ರಮ ಹಾಗೂ ಉತ್ಪಾದನಾ ಯೋಜನೆಗಳ ಅನುಷ್ಠಾನಕ್ಕೆ ವಿವಿಧ ಬಡ್ಡಿದರ ಸಾಲ ಯೋಜನೆಯ ಮೂಲಕ ಆರ್ಥಿಕ ಪ್ರಗತಿಯಲ್ಲಿ ಕೈಜೋಡಿಸುತ್ತಿವೆ. ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕಿನ ಇತಿಹಾಸವನ್ನು ೧೮೭೪ರಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ನೆರೆಯ ನಂಜನಗೂಡಿನಲ್ಲಿ ಬಹು ಹಿಂದೆಯೇ ಶ್ರೀಕಂಠೇಶ್ವರಸ್ವಾಮಿ ಬ್ಯಾಂಕ್ (೧೮೮೫) ಶ್ರೀನಿವಾಸ ಬ್ಯಾಂಕ್ (೧೮೯೩) ಹಾಗೂ ಶ್ರೀ ನಂಜುಂಡೇಶ್ವರ ಬ್ಯಾಂಕು (೧೯೦೮) ಗಳು ಸ್ಥಾಪನೆಗೊಂಡಿದ್ದವು. ಏತನ್ಮಧ್ಯೆ ಸರ್ಕಾರವು ೧೮೭೦ರಷ್ಟು ಹಿಂದೆಯೇ ಉಳಿತಾಯ ಮನೋಭಾವವನ್ನು ಬೆಳಸುವ ಸಲುವಾಗಿ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಉಳಿತಾಯ ಬ್ಯಾಂಕುಗಳನ್ನು ಸ್ಥಾಪಿಸಿತ್ತು. ಇದನ್ನು ಗ್ರಾಮೀಣ ಮಟ್ಟಕ್ಕೂ ವಿಸ್ತರಿಸಲು ಮುಂದಾದ ಸರ್ಕಾರ ಗ್ರಾಮೀಣ ಸೇವಿಂಗ್ಸ್ ಬ್ಯಾಂಕುಗಳನ್ನು ೧೯೧೫ರಲ್ಲಿ ಆರಂಭಿಸಿತು. ಆದರೆ ೧೯೨೨–೨೩ರಲ್ಲಿ ಇವು ಮುಚ್ಚಲ್ಪಟ್ಟವು. ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ವಾಣಿಜ್ಯ ಬ್ಯಾಂಕಿಂಗ್ ಶಕೆ ಆರಂಭಗೊಂಡದ್ದು ೧೯೫೦ರ ದಶಕದ ನಂತರವೇ.

ಏತನ್ಮಧ್ಯೆ ರೈತರನ್ನು ಲೇವಾದೇವಿಗಾರರಿಂದ ರಕ್ಷಿಸುವ ಸಲುವಾಗಿ ೧೯ನೆಯ ಶತಮಾನದ ಕೊನೆಯ ದಶಕದಲ್ಲಿ ಕೃಷಿ ಸಹಕಾರಿ ಬ್ಯಾಂಕ್‌ಗಳ ಸ್ಥಾಪನೆಗೆ ಸರ್ಕಾರ ಮುಂದಾಯಿತು. ಭೂ ಮಾಲೀಕರನ್ನು ಸದಸ್ಯರನ್ನಾಗಿ ಹೊಂದಿರುತ್ತಿದ್ದ ಈ ಬ್ಯಾಂಕ್ ಸಂಗ್ರಹಿಸಿದ್ದ ಠೇವಣಿಯಲ್ಲಿ ಕೃಷಿ ಕಾರ್ಯಗಳಿಗೆ ಸಾಲ ನೀಡುತ್ತಿತ್ತು. ಇಂತಹ ಒಂದು ಬ್ಯಾಂಕ್ ನೆರೆಯ ನಂಜನಗೂಡಿನಲ್ಲಿ, ಜಿಲ್ಲೆಯ ಎರಡನೆಯ ಕೃಷಿ ಬ್ಯಾಂಕಾಗಿ (ಪಾಲಹಳ್ಳಿ ಮೊದಲನೆಯದು–(೧೮೯೪) ೧೮೯೭ರಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ ಇಂತಹ ಕೃಷಿ ಬ್ಯಾಂಕ್‌ಗಳು ೧೯೧೭ರ ವೇಳೆಗೆ ಮುಳುಗಿ ಹೋದವು. ಈ ನಡುವೆ ೧೯೧೩ರಲ್ಲಿ ಆರಂಭಗೊಂಡ ಮೈಸೂರು ಬ್ಯಾಂಕ್, ಇತರ ಬ್ಯಾಂಕ್‌ಗಳ ಆಗಮನದ(೧೯೩೬)ವರೆಗೆ ಸಂಸ್ಥಾನದಲ್ಲಿ ಬ್ಯಾಂಕಿಂಗ್ ಸೇವೆ ನೀಡುತ್ತಿದ್ದ ಏಕೈಕ ಸರ್ಕಾರಿ ಬ್ಯಾಂಕಾಗಿತ್ತು. ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದ ಭಾಗವಾಗಿ ಗ್ರಾಮೀಣ ಪ್ರದೇಶದಲ್ಲಿ ಠೇವಣಿಗಳ ಸಂಗ್ರಹಣೆ, ಕೃಷಿ ಮತ್ತಿತರ ಕ್ಷೇತ್ರಗಳ ಅಭಿವೃದ್ಧಿ, ಹಾಗೂ ಸಾಲ ವಿತರಣೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಗ್ರಾಮೀಣ ಭಾಗದಲ್ಲಿ ಶಾಖೆಗಳನ್ನು ತೆರೆಯಲು ವಾಣಿಜ್ಯ ಬ್ಯಾಂಕ್‌ಗಳಿಗೆ ಹಸಿರು ನಿಶಾನೆ ತೋರಿಸಿದ ಹಿನ್ನೆಲೆಯಲ್ಲಿ ಕ್ರಮೇಣ ತಾಲೂಕಿನಲ್ಲೂ ವೈಶ್ಯ ಬ್ಯಾಂಕ್, ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್, ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮುಂತಾದ ವಾಣಿಜ್ಯ ಬ್ಯಾಂಕ್‌ಗಳು ಶಾಖೆಯನ್ನು ಆರಂಭಿಸಿದವು. ಮುಂದೆ ೧೯೬೯ರಲ್ಲಿ ೧೪ ಪ್ರಮುಖ ವಾಣಿಜ್ಯ ಬ್ಯಾಂಕ್‌ಗಳು ರಾಷ್ಟ್ರೀಕರಣಗೊಂಡುದು ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಅದರ ಬೆನ್ನಲ್ಲೇ ಆರಂಭಗೊಂಡ ಲೀಡ್ ಬ್ಯಾಂಕ್ ಯೋಜನೆಯಂತೆ ಮೈಸೂರು ಬ್ಯಾಂಕ್‌ಗೆ ಜಿಲ್ಲೆಯ ಮಾರ್ಗದರ್ಶಿ (ಲೀಡ್) ಬ್ಯಾಂಕ್ ಜವಾಬ್ದಾರಿಯನ್ನು ೧೯೬೯ರಲ್ಲಿ ವಹಿಸಲಾಯಿತು.

ಇದರ ಸಾಮ್ಯದಲ್ಲಿ ಜಿಲ್ಲೆಯ ಗ್ರಾಮೀಣಾಭಿವೃದ್ಧಿಗಾಗಿ ಕಾವೇರಿ ಗ್ರಾಮೀಣ ಬ್ಯಾಂಕ್ ಜಿಲ್ಲೆಯಲ್ಲಿ ಆರಂಭಗೊಂಡ (೧೯೭೬) ನಂತರ ವಿವಿಧ ವಾಣಿಜ್ಯ ಬ್ಯಾಂಕ್‌ಗಳ ಶಾಖೆಗಳು ಗ್ರಾಮೀಣ, ನಗರ ಹಾಗೂ ಅರೆನಗರ ಪ್ರದೇಶಗಳಲ್ಲಿ ಆರಂಭಗೊಂಡವು. ತತ್ಪರಿಣಾಮವಾಗಿ ಪ್ರತಿ ೧೪,೦೦೦ ಜನರಿಗೆ ಒಂದು ಶಾಖಾ ಬ್ಯಾಂಕ್ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುವಂತಾಯಿತು. ಆದ್ಯತಾ ವಲಯದ ಸಾಲ, ವ್ಯತ್ಯಸ್ಥ ಬಡ್ಡಿಸಾಲ, ಸಾಮಾಜಿಕ ಬ್ಯಾಂಕಿಂಗ್, ಅಂತ್ಯೋದಯ, ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ ಮುಂತಾದ ೨೦ ಅಂಶದ ಕಾರ್ಯಕ್ರಮಗಳಿಗೆ ಬ್ಯಾಂಕ್‌ಗಳು ನೆರವಾದವು. ಮುಂದೆ ೧೯೮೦ರಲ್ಲಿ ರಾಷ್ಟ್ರಮಟ್ಟದಲ್ಲಿ ಮತ್ತೆ ಆರು ಬ್ಯಾಂಕುಗಳು ರಾಷ್ಟ್ರೀಕರಣಗೊಂಡುದು ಮಹತ್ವದ್ದಾಗಿತ್ತು. ಗ್ರಾಮೀಣ ಭಾಗದಲ್ಲಿ ಠೇವಣಿ ಶೇಖರಣೆಗಾಗಿ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಆರಂಭಿಸಿದ ಕಾವೇರಿ ಭಾಗ್ಯನಿಧಿ ಯೋಜನೆಯು ತಾಲೂಕಿನಲ್ಲಿ ದುರ್ಬಲವರ್ಗದ ಜನರಿಗೆ ಸರಳವಾಗಿ ಸಾಲ ಲಭಿಸಬೇಕೆಂಬ ಉದ್ದೇಶದಿಂದ ರೂ.ಐದು ಸಾವಿರದವರೆಗಿನ ಮೊತ್ತವನ್ನು ಶೇ.೧೨.೫ ಬಡ್ಡಿದರದಲ್ಲಿ ಸಾಲವಾಗಿ ನೀಡುವ ಸಾರ್ವಜನಿಕ ಸಾಲ ಮೇಳಗಳನ್ನು ೧೯೮೬ ಹಾಗೂ ೧೯೮೭ರಲ್ಲಿ ಹಮ್ಮಿಕೊಳ್ಳಲಾಗಿತ್ತು. ತಾಲೂಕಿನಲ್ಲಿ ೧೯೯೪ರ ವೇಳೆಗೆ ಮೂರು ಶಾಖಾ ಬ್ಯಾಂಕ್‌ಗಳು ಹಾಗೂ ಐದು ಗ್ರಾಮೀಣ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು.

ಸಂಘಟಿತ ಹಾಗೂ ಅಸಂಘಟಿತ ಬ್ಯಾಂಕಿಂಗ್ ಸಂಸ್ಥೆಗಳು, ಕೃಷಿ, ಕೈಗಾರಿಕೆ, ವ್ಯಾಪಾರ ಮುಂತಾದ ಆರ್ಥಿಕ, ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಹಣವನ್ನು ಸಾಲರೂಪದಲ್ಲಿ ನೀಡಿ ಆ ಪ್ರದೇಶದ ಆರ್ಥಿಕ ಚಟುವಟಿಕೆಗಳು ಬೆಳೆಯುವಂತೆ ಮಾಡುತ್ತಿದ್ದವು. ೧೮೯೮ರಷ್ಟು ಹಿಂದೆಯೇ ಸರಗೂರಿನಲ್ಲಿ ೨೦ ಸದಸ್ಯರನ್ನೊಳಗೊಂಡ ಕೃಷಿ ಬ್ಯಾಂಕನ್ನು ಸರ್ಕಾರ ಆರಂಭಿಸಿತು. ಆದರೆ, ೧೯೧೭ರ ವೇಳೆಗೆ ಅದು ಮುಚ್ಚಿದಂತೆ ತೋರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸಮಾನತೆಯನ್ನು ತರುವ ದೃಷ್ಟಿಯಿಂದ ಸರ್ಕಾರ ಆರ್ಥಿಕ ನೀತಿಯನ್ನು ಕಾರ್ಯರೂಪಕ್ಕೆ ತಂದಿದೆ. ಇದನ್ನು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಜಾರಿಗೆ ತರಲಾಗಿದೆ. ರೈತರು ತಾವು ಸಂಪಾದಿಸಿದ ಹೆಚ್ಚಿನ ಲಾಭಾಂಶವನ್ನು ಬ್ಯಾಂಕಿನಲ್ಲಿ ಇಡಲು ಇದರಿಂದ ಸಹಾಯವಾಗಿದೆ. ಹೆಗ್ಗಡದೇವನಕೋಟೆ ತಾಲೂಕಿನಲ್ಲಿಯೂ ಬ್ಯಾಂಕಿಂಗ್ ವ್ಯವಸ್ಥೆ ಜನರ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಹೆಗ್ಗಡದೇವನಕೋಟೆಯಲ್ಲಿ ೧೯೬೭ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯ ಸ್ಥಾಪನೆಯೊಂದಿಗೆ ತಾಲೂಕಿನಲ್ಲಿ ಆಧುನಿಕ ಬ್ಯಾಂಕಿಂಗ್ ಶಕೆಯು ಆರಂಭವಾಯಿತು. ಮುಂದೆ ೧೯೭೭ರಲ್ಲಿ ವಿಜಯಾ ಬ್ಯಾಂಕ್ ಶಾಖೆಯೂ ಆರಂಭವಾಯಿತು. ಈ ಎರಡೂ ಬ್ಯಾಂಕುಗಳು ತಾಲೂಕಿನ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಿವೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಸರಗೂರಿನಲ್ಲಿಯೂ ಇದೆ. ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾದ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಮುಂದಾಳತ್ವದಲ್ಲಿ ೧೯೭೯ರ ನಂತರ ಹಂತಹಂತವಾಗಿ ಆರಂಭಗೊಂಡ ಕಾವೇರಿ ಗ್ರಾಮೀಣ ಬ್ಯಾಂಕು

ಶಾಖೆಗಳು ೧೯೮೯ರ ವೇಳೆಗೆ ತಾಲ್ಲೂಕಿನ ಹಂಪಾಪುರ, ಹೆಗ್ಗಡದೇವನಕೋಟೆ, ಮಾದಾಪುರ, ಸರಗೂರು, ಯಡಿಯಾಲ, ತುಂಬಸೋಗೆ, ಕ್ಯಾತನಹಳ್ಳಿ, ಬಿ. ಮಟಕೆರೆ, ಅಂತರಸಂತೆ, ಬೀಚನಹಳ್ಳಿ, ಅಣ್ಣೂರು, ಎಡಿಯಾಲಗಳಲ್ಲಿದ್ದು, ರೈತರಿಗೆ ಆರ್ಥಿಕವಾಗಿ ಹೆಚ್ಚಿನ ಸೌಲಭ್ಯವನ್ನು ಒದಗಿಸುತ್ತಿವೆ.

೨೦೦೬ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ವಾಣಿಜ್ಯ ಬ್ಯಾಂಕುಗಳು–೩; ಕಾವೇರಿ ಗ್ರಾಮೀಣ ಬ್ಯಾಂಕುಗಳು–೧೨; ಒಟ್ಟು ಠೇವಣಿಗಳು–೫೪೭೭ ಲಕ್ಷ; ಒಟ್ಟು ಸಾಲಗಳು–೬೫೫೮ ಲಕ್ಷ; ಠೇವಣಿ ಸಾಲದ ಅನುಪಾತ–೧೧೫.೧೧ ಇತ್ತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಮೂರು ವಾಣಿಜ್ಯ ಬ್ಯಾಂಕು ಹಾಗೂ ೧೨ ಗ್ರಾಮೀಣ ಬ್ಯಾಂಕುಗಳಿದ್ದು, ೧೦೯೧೮ ಲಕ್ಷ ರೂ. ಠೇವಣಿ ಸ್ವೀಕರಿಸಿದ್ದು, ೧೨೪೧೨ ಲಕ್ಷ ರೂ. ಮುಂಗಡ ನೀಡಿತು. ಠೇವಣಿ ಸಾಲದ ಅನುಪಾತ ೧೧೩.೬೮ ಆಗಿತ್ತು.

**ಜೀವವಿಮೆ :** ಸಂಸ್ಥಾನದಲ್ಲಿ ೧೮೯೧ರಲ್ಲಿ ಆರಂಭಗೊಂಡ ಇದು ಆರಂಭದಲ್ಲಿ ಸರ್ಕಾರಿ ನೌಕರರಿಗಷ್ಟೇ ಸೀಮಿತವಾಗಿದ್ದು, ಇದನ್ನು ೧೯೧೬ರಲ್ಲಿ ಸಾರ್ವಜನಿಕರಿಗೂ ವಿಸ್ತರಿಸಲಾಯಿತು. ಜೀವವಿಮೆ ಚಟುವಟಿಕೆಯು ೧೯೫೬ರಲ್ಲಿ ರಾಷ್ಟ್ರೀಕರಣಗೊಂಡ ನಂತರ ಜೀವವಿಮೆ ಹಾಗೂ ಸಾಮಾನ್ಯ ವಿಮೆಯಲ್ಲಿ ಸಾಕಷ್ಟು ಪ್ರಗತಿಯಾಯಿತು. ತತ್ಪರಿಣಾಮವಾಗಿ ಭಾರತೀಯ ಜೀವವಿಮಾ ನಿಗಮದ ಶಾಖಾ ಕಚೇರಿಯು ಕೊಳ್ಳೇಗಾಲದಲ್ಲಿದ್ದು, ಅಲ್ಲದೇ ಅಂಚೆ ಜೀವವಿಮಾ ಸೌಲಭ್ಯವೂ ತಾಲೂಕಿನ ಅಂಚೆ ಇಲಾಖೆಗಳಲ್ಲಿ ಲಭ್ಯವಿದೆ.

**ಸರ್ಕಾರಿ ವಿಮೆ:** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ರಾಜ್ಯ ಸರ್ಕಾರಿ ನೌಕರರಿಗೇ ಸೀಮಿತವಾಗಿದ್ದು, ಸರ್ಕಾರಿ ನೌಕರರ ಜೀವವಿಮೆ, ವಾಹನ ವಿಮೆಗಳನ್ನು ನಿರ್ವಹಿಸುತ್ತಿದ್ದು, ತಾಲೂಕಿನ ಮೂರನೆಯ ಹಾಗೂ ನಾಲ್ಕನೆಯ ದರ್ಜೆಯ ನೌಕರರ ವಿಮಾಖಾತೆಗಳನ್ನು ಜಿಲ್ಲಾ ವಿಮಾ ಕಚೇರಿಯು ೧೯೮೨ರ ವರೆಗೆ ನಿರ್ವಹಿಸಿದರೆ, ಪತ್ರಾಂಕಿತ ಅಧಿಕಾರಿಗಳ ಖಾತೆಯನ್ನು ವಿಭಾಗೀಯ ವಿಮಾ ಕಚೇರಿಯು ನಿರ್ವಹಿಸುತ್ತಿತ್ತು. ಇತ್ತೀಚೆಗೆ ವಿಭಾಗೀಯ ಕಚೇರಿಯ ರದ್ದತಿಯಿಂದಾಗಿ ಪತ್ರಾಂಕಿತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಸರ್ಕಾರಿ ನೌಕರರ ಖಾತೆಯನ್ನು ಜಿಲ್ಲಾ ವಿಮಾ ಕಚೇರಿಯೇ ನಿರ್ವಹಿಸುತ್ತದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು (೧೯೫೭) ಆರಂಭವಾಗುವುದಕ್ಕೆ ಮೊದಲೇ ೧೮೭೦ರಷ್ಟು ಹಿಂದೆಯೇ ಉಳಿತಾಯ ಬ್ಯಾಂಕ್‌ಗಳು ತಾಲೂಕು ಮಟ್ಟದಲ್ಲಿ ಆರಂಭಗೊಂಡವು. ಮುಂದೆ ೧೮೮೨ರಲ್ಲಿ ಅಂಚೆಕಚೇರಿಗಳಲ್ಲಿ ಉಳಿತಾಯ ಖಾತೆಯನ್ನು ಗ್ರಾಹಕರಿಗಾಗಿ ಆರಂಭಿಸಲಾಯಿತು. ಆರಂಭದಲ್ಲಿ ಕನಿಷ್ಟ ನಾಲ್ಕಾಣೆಯಿಂದ ಗರಿಷ್ಟ ೫.೦೦ ರೂ.ಗಳನ್ನು ಠೇವಣಿಯಾಗಿ ಇಡಬಹುದಾಗಿದ್ದು, ವಾರ್ಷಿಕ ಬಡ್ಡಿ ಶೇ. ೩$^{೨}/_{೪}$ ಇದ್ದು, ೧೮೮೯ರಲ್ಲಿ ಗರಿಷ್ಟ ಮೊತ್ತವನ್ನು ಎರಡು ರೂ.ಗಳಿಗಿಳಿಸಲಾಯಿತು. ಪ್ರಸ್ತುತ ಅಂಚೆ ಇಲಾಖೆಯು ಉಳಿತಾಯ ಖಾತೆ, ಸಿ.ಟಿ.ಡಿ. ಆರ್.ಡಿ. ಎನ್.ಎಸ್.ಸಿ.,

ಇಂದಿರಾವಿಕಾಸ್, ಎನ್.ಎಸ್.ಎಸ್., ಎಂ.ಐ.ಎಸ್. ಮುಂತಾದ ಯೋಜನಾ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಿದೆ.

**ನಾಣ್ಯಪದ್ಧತಿ :** ತಾಲೂಕಿನಲ್ಲಿ ಲಭಿಸಿರುವ ವಿವಿಧ ರಾಜಮನೆತನಕ್ಕೆ ಸೇರಿದ ಶಾಸನಗಳಲ್ಲಿ ಗದ್ಯಾಣ, ವರಾಹ, ಹಾಗ, ಹಣ, ದ್ರಮ್ಮ, ಮುಂತಾದ ಚಿನ್ನ ಬೆಳ್ಳಿ ತಾಮ್ರದ ನಾಣ್ಯಗಳ ಉಲ್ಲೇಖವಿದೆ. ಆದರೆ ತಲಕಾಡಿನ ಗಂಗರ ಆಳ್ವಿಕೆಗೆ ಸೇರಿದ ಈ ಪ್ರದೇಶದಲ್ಲಿ ಅವರ ನಾಣ್ಯಗಳು ಲಭಿಸಿಲ್ಲ. ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಚಿನ್ನದ ನಾಣ್ಯಗಳಲ್ಲಿ ತಲಕಾಡುಗೊಂಡ ಎಂಬ ಬಿರುದಿದ್ದ ಬಗ್ಗೆ ಮಾಹಿತಿ ಲಭ್ಯವಿದ್ದು, ಒಂದೆರಡು ನಾಣ್ಯಗಳೂ ಬೇರೆಡೆ ಲಭಿಸಿವೆ. ಹೈದರ್–ಟಿಪ್ಪು ಕಾಲದಲ್ಲಿ ವಿವಿಧ ಮೌಲ್ಯದ ಚಿನ್ನ–ಬೆಳ್ಳಿಯ ಅಹಮದಿ, ಹೈದರಿ, ಇಮಾನಿ, ಅಬೀದಿ ಬಾದೂರಿ ಪಣ ಎಂಬ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ಬಿಡಲಾಗಿತ್ತು. ಅಲ್ಲದೇ ೧೭೮೨ರಲ್ಲಿ ೧/೪, ೧/೨ ಹಾಗೂ ಒಂದು ಆಣೆ(೧೨ ಕಾಸು)ಯ ನಾಣ್ಯಗಳನ್ನು ಬಳಕೆಗೆ ತರಲಾಯಿತು. ಮುಂದೆ ಸಂಸ್ಥಾನವು ಬ್ರಿಟಿಷ್ ಕಮೀಷನರುಗಳ ಆಡಳಿತಕ್ಕೊಳಪಟ್ಟ ನಂತರ ಭಾರತೀಯ ನಾಣ್ಯ ಕಾಯ್ದೆ (೧೮೭೦)ಯನ್ನು ಸಂಸ್ಥಾನಕ್ಕೂ ವಿಸ್ತರಿಸಲಾಯಿತು. ಇದರೊಂದಿಗೆ ಬ್ರಿಟಿಷ್ ನಾಣ್ಯಗಳು ಸಂಸ್ಥಾನದ ಅಧೀಕೃತ ನಾಣ್ಯಗಳಾದವು. ಸಂಸ್ಥಾನದ ಆಡಳಿತವು ೧೮೮೧ರಲ್ಲಿ ಮೈಸೂರು ಅರಸರಿಗೆ ಹಸ್ತಾಂತರಗೊಂಡ ಮೇಲೂ ಬ್ರಿಟಿಷ್ ನಾಣ್ಯಗಳು ಅಧಿಕೃತ ನಾಣ್ಯಗಳಾಗಿ ಮುಂದುವರಿದವು. ಮುಂದೆ ೧೯೧೮ರಲ್ಲಿ ನೋಟುಗಳ ಚಲಾವಣೆಯು ಆರಂಭವಾಯಿತು. ಅಲ್ಲದೇ ಬ್ರಿಟಿಷರು ಚಲಾವಣೆಗೆ ತಂದಿದ್ದ ಕಾಸು, ಮೂರು (೧/೪ ಆಣೆ), ಆರು (ಅರ್ಧ ಆಣೆ) ಕಾಸು ಮೌಲ್ಯದ ತಾಮ್ರದ ನಾಣ್ಯಗಳು, ಚವಿ (ಎರಡು) ಹಾಗೂ ಪಾವಲಿ (ನಾಲು) ಆಣೆಯ ನಿಕಲ್ ನಾಣ್ಯಗಳು ಹಾಗೂ (ಅರ್ಧ ಹಾಗೂ ಒಂದು ರೂಪಾಯಿಯ) ಬೆಳ್ಳಿಯ ರೂಪಾಯಿಗಳು ಚಲಾವಣೆಯಲ್ಲಿದ್ದವು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರದ ಲಾಂಛನದೊಂದಿಗೆ ನಾಣ್ಯ ಹಾಗೂ ನೋಟುಗಳು ಚಲಾವಣೆಗೆ ಬಂದವು. ಆದರೂ ಹದಿನಾರು ಆಣೆಯ ರೂಪಾಯಿ ಹಾಗೂ ೧೨ ಕಾಸಿನ ಆಣೆಯು ಮುಂದುವರಿಯಿತು. ಮುಂದೆ ೧೯೫೭ರಲ್ಲಿ ನಾಣ್ಯಪದ್ಧತಿಯಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು. ಅಲ್ಲಿಂದೀಚೆಗೆ ಭಾರತೀಯ ನಾಣ್ಯಪದ್ಧತಿ ಸಾಕಷ್ಟು ಸುಧಾರಿಸಿದ್ದು, ಇಂದು ಪೈಸೆ, ಆಣೆಗಳು ಲೆಕ್ಕಕ್ಕಿದ್ದರೂ, ಅವುಗಳ ಚಲಾವಣೆ ಕಡಿಮೆಯಾಗುತ್ತಿದ್ದು, ರೂಪಾಯಿ ನಾಣ್ಯಗಳೇ ಕನಿಷ್ಟ ಮೌಲ್ಯದ ನಾಣ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಮೂಡುವಂತಾಗಿದೆ. ಒಂದು, ಎರಡು, ಐದು, ಹತ್ತು, ೨೦, ೫೦, ೧೦೦, ೫೦೦, ೧೦೦೦ ರೂ. ಮೌಲ್ಯದ ನೋಟುಗಳ ಜೊತೆಗೆ ಒಂದು, ಎರಡು, ಐದು ಹಾಗೂ ಹತ್ತು ರೂ. ಮೌಲ್ಯದ ನಾಣ್ಯಗಳೂ ಬಳಕೆಯಲ್ಲಿವೆ.

**ಸಹಕಾರ :** ಹೆಗ್ಗಡದೇವನಕೋಟೆಯಲ್ಲಿ ಎಂ.ಡಿ.ಸಿ.ಸಿ. ಶಾಖಾ ಬ್ಯಾಂಕ್, ಪಿ.ಎಲ್.ಡಿ. (೧೯೬೨) ಬ್ಯಾಂಕ್‌ಗಳಿದ್ದು, ತಾಲೂಕಿನ ವಿವಿಧೆಡೆ ೨೬ ವ್ಯವಸಾಯ ಸೇವಾ ಸಹಕಾರ ಸಂಘಗಳು, ೪೦ ಹಾಲು ಉತ್ಪಾದಕ ಸಹಕಾರ ಸಂಘಗಳು, ೨ ಗೃಹ ನಿರ್ಮಾಣ ಸಹಕಾರ ಸಂಘಗಳು ರೈತರ ಪುರೋಭಿವೃದ್ಧಿಗಾಗಿ ವಿವಿಧ ಯೋಜನೆಗಳ ಮೂಲಕ

ಅನೇಕ ಸೌಲಭ್ಯಗಳನ್ನು ಕಲ್ಪಿಸಿವೆ. ತಾಲೂಕು ಕೇಂದ್ರದಲ್ಲಿ ಲಕ್ಷ್ಮೀವರದರಾಜ ಸೊಸೈಟಿ ೧೯೧೦ರಲ್ಲೂ ಹೊಮರಗಳ್ಳಿಯ ದುರ್ಗಾ-ಪರಮೇಶ್ವರಿ ಸಹಕಾರಿ ಸಂಘ ಹಾಗೂ ಸರಗೂರಿನ ಸಹಕಾರ ಸಂಘಗಳು ೧೯೧೧ರಲ್ಲಿ ಕಾರ್ಯಾರಂಭ ಮಾಡಿದವು. ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘ, ೧೯೪೯ರಲ್ಲಿ ಆರಂಭವಾಯಿತು. ೧೯೮೭ರ ವೇಳೆಗೆ ತಾಲೂಕಿನಲ್ಲಿ ೧೦೬ ಸಹಕಾರಿ ಸಂಘಗಳಿದ್ದವು.

ಸ್ವಾತಂತ್ರ್ಯಾನಂತರ ದೇಶದಲ್ಲಿ ಸಹಕಾರ ಕ್ಷೇತ್ರದಲ್ಲಿ ದೊಡ್ಡ ಆಂದೋಲನ ಉಂಟಾಯಿತು. ಇದರ ಪರಿಣಾಮವಾಗಿ ಅನೇಕ ಬಗೆಯ ಸಹಕಾರ ಸಂಘಗಳು ಸ್ಥಾಪನೆಗೊಂಡವು. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ದೊರೆಯಿತು. ತಾವು ಬೆಳೆದ ಕೃಷಿ ಉತ್ಪನ್ನಗಳನ್ನು, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ ಮೊದಲಾದ ಉತ್ಪನ್ನಗಳನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವುದು, ಕೊಂಡು-ಕೊಳ್ಳುವುದು ಇದರಿಂದ ಸಾಧ್ಯವಾಯಿತು. ತಾವು ಬೆಳೆದ ಬೆಳೆಗೆ ಹಾಗೂ ಕೊಂಡು ಕೊಳ್ಳುವ ವಸ್ತುಗಳಿಗೆ ನ್ಯಾಯವಾದ ಬೆಲೆ ಸಿಗುವಂತಾಯಿತು. ಈ ಹಿನ್ನೆಲೆಯಲ್ಲಿ ತಾಲೂಕಿನಲ್ಲಿರುವ ಬ್ಯಾಂಕು, ಸಹಕಾರ ಸಂಘ, ಕೃಷಿ ಉತ್ಪನ್ನ ಮಾರುಕಟ್ಟೆ ವಿವರಗಳನ್ನು ಮುಂದೆ ತಿಳಿಸಲಾಗಿದೆ.

ತಾಲೂಕಿನ ಹೆಗ್ಗಡದೇವನಕೋಟೆ (೧೯೮೫) ಹಾಗೂ ಸರಗೂರುಗಳಲ್ಲಿ (೧೯೭೯) ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಇದ್ದು, ರೈತರ ಕೃಷಿಉತ್ಪನ್ನಗಳಿಗೆ ಉತ್ತಮ ದರ ದೊರಕಿಸಿಕೊಡುವ ಮೂಲಕ ಮಾರುಕಟ್ಟೆ ಸೌಕರ್ಯವನ್ನು ಒದಗಿಸುತ್ತಿದೆ. ಇದರಿಂದ ತಾಲೂಕಿನ ರೈತರು ಕೃಷಿ ಕೆಲಸವನ್ನು ಸುಲಲಿತವಾಗಿ ಮಾಡಲು ಹೆಚ್ಚಿನ ಅನುಕೂಲವಾಗಿದೆ. ಇದರ ಜೊತೆಗೆ ತಾಲೂಕಿನಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳು, ಮೀನುಗಾರಿಕೆ, ತೋಟಗಾರಿಕೆ, ರೇಷ್ಮೆ, ತಂಬಾಕು, ಹತ್ತಿ, ಕಬ್ಬು, ಕೋಳಿ ಸಾಕಾಣಿಕೆಗಳು, ಹಾಲು ಉತ್ಪಾದಕ ಸಹಕಾರ ಸಂಘಗಳು ರೈತರು ಅರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿವೆ.

ವಾಣಿಜ್ಯ ಬ್ಯಾಂಕುಗಳು, ಸಹಕಾರ ಸಂಘಗಳು, ಕೃಷಿ ಉತ್ಪನ್ನ ಮಾರುಕಟ್ಟೆಗಳ ಜೊತೆಗೆ ಆಯಾಯ ಭಾಗದಲ್ಲಿ ನಡೆಯುವ ಸಂತೆಗಳು ರೈತರಿಗೆ ನೆರವಾಗುತ್ತಿವೆ. ತಾಲ್ಲೂಕಿನಲ್ಲಿ ನಾಲ್ಕು ಕಡೆ ಸಂತೆ ನಡೆಯುತ್ತಿದ್ದು ಹೆಗ್ಗಡದೇವನಕೋಟೆಯಲ್ಲಿ ಮಂಗಳವಾರ, ಸರಗೂರಿನಲ್ಲಿ ಶುಕ್ರವಾರ, ಹಂಪಾಪುರದಲ್ಲಿ ಭಾನುವಾರ ಹಾಗೂ ಹ್ಯಾಂಡ್‌ಪೋಸ್ಟ್‌ನಲ್ಲಿ ಭಾನುವಾರ ಸಂತೆಯಾಗುತ್ತದೆ. ಇವುಗಳಿಂದ ರೈತರು ತಾವು ಬೆಳೆದ ಆಹಾರ ಹಾಗೂ ಆರ್ಥಿಕ ಬೆಳೆಗಳನ್ನು, ಜಾನುವಾರುಗಳನ್ನು ಮಧ್ಯವರ್ತಿಗಳ ಸಹಾಯವಿಲ್ಲದೆ ನಿಖರವಾದ ಬೆಲೆಗೆ ಕೊಳ್ಳುವುದು ಹಾಗೂ ಮಾರುವುದು ಸಾಧ್ಯವಾಗುತ್ತದೆ. ವಂಚನೆ, ಶೋಷಣೆಯಿಂದ ರೈತರು ದೂರವಿರಲು ಸಂತೆಗಳು ಸಹಕಾರಿಯಾಗಿವೆ.

ತಾಲೂಕಿನಲ್ಲಿರುವ ವಿವಿಧ ಬಗೆಯ ಬ್ಯಾಂಕು ಹಾಗೂ ಸಹಕಾರ ಸಂಘಗಳು ನಡೆಸುವ ವ್ಯಾಪಾರ ವಹಿವಾಟಿನ ವಿವರಗಳನ್ನು ಅಂಕಿ ಅಂಶಗಳ ಸಮೇತ ಮುಂದೆ ಕೊಡಲಾಗಿದೆ.

**ಸಹಕಾರ ಹಾಗೂ ಕೃಷಿ ವಹಿವಾಟು :** ಪ್ರಾಥಮಿಕ ಭೂಅಭಿವೃದ್ಧಿ ಬ್ಯಾಂಕುಗಳು–೧; ಸಾಲ ಪಡೆದಿರುವವರ ಸಂಖ್ಯೆ–೧೮೫; ಒಟ್ಟು ಸಾಲ–೭೦.೯೨; ಇತರ ಸಹಕಾರ ಬ್ಯಾಂಕುಗಳು–೧೮೭೦; ಸಾಲ ನೀಡಿಕೆ–೪೮೬.೮೧ (೨೦೦೫–೦೬). ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಏಕೈಕ ಸಹಕಾರಿ ಬ್ಯಾಂಕು ೧೮.೦೩ ಲಕ್ಷ ರೂ. ಸಾಲ ನೀಡಿತ್ತು.

**ಕ್ರೆಡಿಟ್ ಸಹಕಾರ ಸಂಘಗಳು :** ೧) ವ್ಯವಸಾಯ–೨೦; ಸದಸ್ಯರು–೧೮,೯೫೦; ೨) ಹಾಲು ಉತ್ಪಾದನೆ–೪೦; ಸದಸ್ಯರು–೮೬೫೦; ೩) ಇತರೆ–೩೮; ಸದಸ್ಯರು–೧೧,೪೦೦; ೪) ಒಟ್ಟು–೯೮; ಸದಸ್ಯರು–೩೯,೦೦೦ (೨೦೦೫–೦೬). ೨೦೦೯ ಮಾರ್ಚ್ ಅಂತ್ಯಕ್ಕೆ ಇದು ಕ್ರಮವಾಗಿ ೧) ೨೦ – ೨೫೩೬೦, ೨) ೮೩–೧೩೮೦೦, ೩) ೩೨ – ೧೧೯೫೦ ಸದಸ್ಯರನ್ನು ಹೊಂದಿತ್ತು.

**ಕೃಷಿ ಸಹಕಾರ ಸಂಘಗಳಿಂದ ಕೊಡಲ್ಪಟ್ಟ ಸಾಲ :** ಅಲ್ಪಾವಧಿ–೪೩೭.೫೭ ಲಕ್ಷ, ಮಧ್ಯಮಾವಧಿ–೪೯.೨೪, ಒಟ್ಟು–೪೮೬.೮೧ (೨೦೦೫–೦೬). ೨೦೦೯ರ ಅಂತ್ಯಕ್ಕೆ ೩೮೪.೩೨ ಲಕ್ಷ ಅಲ್ಪಾವಧಿ ೮.೪೦ ಲಕ್ಷ ರೂ. ಮಧ್ಯಮಾವಧಿ ಹಾಗೂ ೭೦.೩೦ ಲಕ್ಷ ರೂ. ದೀರ್ಘಾವಧಿ ಸಾಲವನ್ನು ನೀಡಲಾಗಿತ್ತು.

## ನಿಯಂತ್ರಿತ ಮಾರುಕಟ್ಟೆಗಳು

**ಸಂತೆಗಳು :** ಕೇಂದ್ರಸ್ಥಾನಯಲ್ಲಿ ಹೆಗ್ಗಡದೇವನಕೋಟೆ ಮಂಗಳವಾರ, ಹೋಬಳಿ ಕೇಂದ್ರಗಳಾದ ಸರಗೂರಿನಲ್ಲಿ ಶುಕ್ರವಾರ, ಹಂಪಾಪುರದಲ್ಲಿ ಭಾನುವಾರ ಸಂತೆಗಳು ನಡೆಯುತ್ತವೆ. ಇತ್ತೀಚೆಗೆ ಹ್ಯಾಂಡ್‌ಪೋಸ್ಟ್‌ನಲ್ಲೂ ಪ್ರತಿ ಭಾನುವಾರ ದನಗಳ ಸಂತೆ ನಡೆಯುತ್ತದೆ. ರೈತರು ತಾವು ಬೆಳೆದ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ದಳ್ಳಾಳಿಗಳ, ಮಧ್ಯವರ್ತಿಗಳ ಸಹಾಯವಿಲ್ಲದೆ ನಿಖರವಾದ ಬೆಲೆಗೆ ಮಾರಾಟ ಮಾಡುವ ಹಾಗೂ ಕೊಂಡುಕೊಳ್ಳುವ ವ್ಯವಸ್ಥೆ ಸಂತೆಗಳಲ್ಲಿರುತ್ತದೆ.

**ನಿಯಂತ್ರಿತ ಮಾರುಕಟ್ಟೆಗಳು :** ರೈತರಿಗೆ ಯೋಗ್ಯ ಹಾಗೂ ಸ್ಪರ್ಧಾತ್ಮಕ ಬೆಲೆಯನ್ನು ದೊರಕಿಸುವ ಸಲುವಾಗಿ ಸರ್ಕಾರವು ನಿಯಂತ್ರಿಕ ಮಾರುಕಟ್ಟೆಗಳನ್ನು ೧೯೩೯ರ ಮೈಸೂರು ಕೃಷಿಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ವಯ ೧೯೪೭ರಲ್ಲಿ ಆರಂಭಿಸಿತು. ಮುಂದೆ ೧೯೬೬ರ ಕಾಯ್ದೆಯನ್ವಯ ಹೆಚ್.ಡಿ. ಕೋಟೆ, ಸರಗೂರು ಹಾಗೂ ಅಂತರಸಂತೆಗಳಲ್ಲಿ ಮಾರುಕಟ್ಟೆ, ಉಪಮಾರುಕಟ್ಟೆಗಳು ತಾಲೂಕಿನಲ್ಲಿ ಆರಂಭಗೊಂಡವು.

೨೦೦೬ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಒಂದು ಮುಖ್ಯ ಮಾರುಕಟ್ಟೆ (ಎಚ್.ಡಿ.ಕೋಟೆ), ಎರಡು ಉಪಮಾರುಕಟ್ಟೆಗಳಿದ್ದು (ಸಂತೆಸರಗೂರು ಹಾಗೂ ಅಂತರಸಂತೆ) ಅವುಗಳ ವ್ಯವಹಾರ ಮೌಲ್ಯವು ೪೦.೬೭ ಕೋಟಿ ರೂ.ಗಳಾಗಿತ್ತು. ೨೦೦೯ರ ಮಾರ್ಚ್ ಅಂತ್ಯಕ್ಕೂ ಮಾರುಕಟ್ಟೆಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಆದರೆ ಈ ಸಾಲಿನಲ್ಲಾದ ವ್ಯವಹಾರಗಳ ಮೌಲ್ಯವು ೪೦.೫೭ ಲಕ್ಷ ರೂ. ಆಗಿತ್ತು.

**ಸಾರ್ವಜನಿಕ ಪಡಿತರ ವಿತರಣೆ :** ಈ ವ್ಯವಸ್ಥೆಯು ೧೯೪೪ರಷ್ಟು ಹಿಂದೆಯೇ ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದರೂ, ೧೯೪೮ರಲ್ಲಿ ಅದನ್ನು ರದ್ದುಗೊಳಿಸಲಾಯಿತು. ಆದರೆ ಇದರ ಅಗತ್ಯ ೧೯೬೫ರಲ್ಲಿ ಉದ್ಭವಿಸಿದಾಗ ಆಯ್ದ ನಗರಗಳಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಆರಂಭಿಸಲಾಯಿತು. ಇದನ್ನು ೧೯೭೮ರ ವೇಳೆಗೆ ೪೦,೦೦೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಪಟ್ಟಣಗಳಿಗೆ ವಿಸ್ತರಿಸಲಾಯಿತು. ಇದನ್ನು ಕ್ರಮೇಣ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಯಿತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೨೫ ನ್ಯಾಯಬೆಲೆ ಅಂಗಡಿಗಳಿದ್ದು, ವಿತರಣೆಯಾಗಿದ್ದ ಒಟ್ಟು ೭೮,೬೭೫ ಪಡಿತರ ಚೀಟಿಗಳಲ್ಲಿ ೭೦,೭೮೦ ಬಿ.ಪಿ.ಎಲ್. ಹಾಗೂ ೭,೮೯೫ ಎ.ಪಿ.ಎಲ್. ಪಡಿತರ ಚೀಟಿಗಳನ್ನು ನೀಡಲಾಗಿತ್ತು.

**ಉಗ್ರಾಣ ವ್ಯವಸ್ಥೆ :** ಸಾಂಪ್ರದಾಯಕವಾಗಿ ರೈತರು ಬೆಳೆದ ಹೆಚ್ಚುವರಿ ಬೆಳೆಯನ್ನು 'ಕಣಜ' 'ಹಗೇವು' ಮುಂತಾದೆಡೆಗಳಲ್ಲಿ ಶೇಖರಿಸಿಡುತ್ತಾರೆ. ಆದರೆ ಇವು ಹಾಳಾಗುವ ಸಾಧ್ಯತೆಯಿರುವುದರಿಂದ ರೈತರ ಅನುಕೂಲಕ್ಕಾಗಿ ಉಗ್ರಾಣಗಳ ನಿರ್ಮಾಣಕ್ಕೆ ಸರ್ಕಾರ ೧೯೬೨ರಲ್ಲಿ ಮುಂದಾಯಿತು. ಆದರೆ ರಾಜ್ಯ ಉಗ್ರಾಣ ನಿಗಮಕ್ಕೆ ಸೇರಿದ ತಾಲೂಕು ಕೇಂದ್ರ ಹೆಗ್ಗಡದೇವನಕೋಟೆ ಸೇರಿದಂತೆ ತಾಲೂಕಿನಲ್ಲಿ ಇನ್ನೆಲ್ಲೂ ಇರಲಿಲ್ಲ. ಆದರೆ ಆನಂತರದಲ್ಲಿ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿ ಹೆಗ್ಗಡದೇವನಕೋಟೆಯಲ್ಲಿಂದು ಉಗ್ರಾಣ ವ್ಯವಸ್ಥೆ ಇದ್ದು, ಉಗಮವು ದಾಸ್ತಾನುದಾರರಿಗೆ ಸಂಗ್ರಹಣೆ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ದಾಸ್ತಾನುಗಳಿಗೆ ಧೂಮೋಪಚಾರ, ಔಷಧ ಸಿಂಪಡಣೆ ಸೌಲಭ್ಯವನ್ನೂ ನೀಡುತ್ತಿದ್ದು, ರೈತರು, ದಾಸ್ತಾನುದಾರರು, ಉಗ್ರಾಣ ರಸೀತಿಯ ಆಧಾರದ ಮೇಲೆ ಬ್ಯಾಂಕುಗಳಿಂದ ಬೆಳೆ ಸಾಲವನ್ನು ಪಡೆಯಬಹುದಾಗಿದೆ.

**ತೂಕ ಮತ್ತು ಅಳತೆ :** ನಾಣ್ಯ ಪದ್ಧತಿಯಂತೆ ತೂಕ ಮತ್ತು ಅಳತೆಯಲ್ಲೂ ಪ್ರಾದೇಶಿಕ ವ್ಯತ್ಯಾಸವಿತ್ತು. ತಾಲೂಕಿನ ಪ್ರಾಚೀನ ಶಾಸನಗಳಲ್ಲಿ ಖಂಡುಗ, ಕೊಳಗಗಳನ್ನು ದವಸ ಧಾನ್ಯಗಳನ್ನು ಅಳೆಯಲೂ; ವೀಸೆ, ಸೇರು, ಹಾಗೂ ಸೊಲಿಗೆಯನ್ನು ದ್ರವ್ಯವಸ್ತುಗಳನ್ನು ಅಳೆಯಲು ಬಳಸುತ್ತಿದ್ದುದರ ಬಗ್ಗೆ ಹಲವಾರು ಉಲ್ಲೇಖ ಲಭಿಸುತ್ತದೆ. ಭೂಮಿಯನ್ನು ಅಳೆಯಲು ಗೇಣು, ಪಾದಳತೆಗಳು ರೂಢಿಯಲ್ಲಿದ್ದು, ಮೂಗೂರಿನ ಹೊಯ್ಸಳ ಶಾಸನವೊಂದು ಭೂಮಾಪನಕ್ಕೆ ಬಳಸುತ್ತಿದ್ದ ಅಳತೆ ಕೋಲನ್ನು ಉಲ್ಲೇಖಿಸುತ್ತಿದ್ದು,

ಶಾಸನದ ಕೆಳಗೆ, ಗೇಣಿನ ಅಳತೆಗೋಲಿನ ಎರಡು ತುದಿಗಳನ್ನು ಗುರುತು ಮಾಡಿರುವ ಅಂಶ ಉಲ್ಲೇಖಾರ್ಹವಾಗಿದೆ. ಮನೆ, ಹಿತ್ತಿಲು, ಹಾಗೂ ನಿವೇಶನಗಳನ್ನು ಅಳೆಯಲು ಹಸ್ತ, ಮೊಳ, ಮಾರುಗಳು ಬಳಕೆಯಲ್ಲಿದ್ದು, ಇವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತಿತ್ತು. ಇದನ್ನು ಮನಗಂಡ ಚಿಕ್ಕದೇವರಾಜ ಒಡೆಯರು ತಮ್ಮ ಸಂಸ್ಥಾನದ ೮೪ ಗಡಿಗಳಲ್ಲೂ ಏಕ ಪ್ರಕಾರದ ತೂಕ–ಅಳತೆಗಳನ್ನು ಜಾರಿಗೆ ತರಲು ಉದ್ದೇಶಿಸಿ, ಅವುಗಳ ಮೇಲೆ ರಾಜಮುದ್ರೆ ಒತ್ತಿ ಪ್ರತೀ ಚಾವಡಿಯಲ್ಲಿ ಇಡುವ ಮೂಲಕ ಅಂಗಡಿ ಮಾರುಕಟ್ಟೆಗಳಲ್ಲಿ ಅವನ್ನೂ ಬಳಸುವುದಕ್ಕೆ ಅವಕಾಶ ಕಲ್ಪಿಸಿದರು. ಮೂರು ಕಂಠಿರಾಯಿ ಹಣಗಳಿಗೆ ಒಂದು ದುಡ್ಡಿನ ಲೆಕ್ಕದಲ್ಲಿ ಮೇಲಿನ ತೂಕ ವ್ಯವಸ್ಥೆಯನ್ನೂ ಜಾರಿಗೆ ತರಲಾಯಿತು. ಸ್ವಾತಂತ್ರ್ಯಾನಂತರ ೧೯೫೮ರ ಕಾಯ್ದೆಯನ್ವಯ ಮೆಟ್ರಿಕ್ ಪದ್ಧತಿಯು ೧೯೬೦ರಲ್ಲಿ ರಾಜ್ಯದಾದ್ಯಂತ ಜಾರಿಗೊಳಿಸಿ ೧೯೬೨ರಿಂದ ಕಡ್ಡಾಯಗೊಳಿಸಲಾಯಿತು. ದ್ರವಮಾಪನಕ್ಕೆ ಸೇರು, ಪಾವು, ಚಟಾಕುಗಳ ಬದಲಾಗಿ ಲೀಟರ್; ವೀಸೆಗೆ ಬದಲು ಕಿಲೋಗ್ರಾಮ್, ಉದ್ದದ ಅಳತೆಗೆ ಸೆ.ಮೀ. ಮೀಟರ್‌ಗಳು ಬಳಕೆಗೆ ಬಂದವು. ಹಿಂದೆ ತೆರಿಗೆಯನ್ನೂ ದವಸ ಧಾನ್ಯರೂಪದಲ್ಲಿ ಸಂಗ್ರಹಿಸುತ್ತಿದ್ದು, ಬರಗಾಲ ಸಂದರ್ಭದಲ್ಲಿ ಜನರಿಗೆ ಬರಪರಿಹಾರವಾಗಿ ನೀಡಲಾಗುತ್ತಿತ್ತು. ತೂಕ ಅಳತೆ ಮಾಪನಗಳಲ್ಲಿ ಏಕತೆಯನ್ನೂ ನಿಖರತೆಯನ್ನೂ ಸಾಧಿಸಲು ಅವುಗಳ ಮೇಲುಸ್ತುವಾರಿಗಾಗಿ ಜಿಲ್ಲಾ ಹಾಗೂ ಉಪವಿಭಾಗ ಮಟ್ಟದಲ್ಲಿ ಕಾನೂನು ಮಾಪನ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ.

**ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸ್ತ್ರೀಶಕ್ತಿ ಯೋಜನೆ :** ೨೦೦೬ರ ಮಾರ್ಚ್ ಅಂತ್ಯಕ್ಕೆ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ೩೫೬ ಸ್ತ್ರೀಶಕ್ತಿ ಸಂಘಗಳಿದ್ದು, ಸಂಘದಲ್ಲಿರುವ ೧೫೮೬ ಪರಿಶಿಷ್ಟ ಜಾತಿ ಮಹಿಳೆಯರು, ೪೨೧ ಪರಿಶಿಷ್ಟ ಪಂಗಡದ ಮಹಿಳೆಯರು ಸಂಘದಲ್ಲಿರುವ ಒಟ್ಟು ಎಲ್ಲಾ ವರ್ಗದ ಮಹಿಳೆಯರು ೬೦೦೮ ಇರುತ್ತಾರೆ.

ತಾಲೂಕಿನ ಉಳಿತಾಯ ಪ್ರಾರಂಭಿಸಿರುವ ೩೫೬ ಸ್ತ್ರೀಶಕ್ತಿ ಸಂಘಗಳ ಪೈಕಿ ೧೨೭ ಸ್ತ್ರೀಶಕ್ತಿ ಸಂಘಗಳು ೭೧.೭೪ ಮೊತ್ತವನ್ನು ಬ್ಯಾಂಕಿನಿಂದ ಸಾಲಪಡೆದಿರುತ್ತವೆ. ಹೆಗ್ಗಡದೇವನಕೋಟೆ ತಾಲೂಕಿನ ಸ್ತ್ರೀಶಕ್ತಿ ಸಂಘಗಳಿಗೆ ಸರ್ಕಾರ ನೀಡಿರುವ ಆವರ್ತನಿಧಿ ೧೭.೮೦ ಸಾವಿರ ರೂ.ಗಳು. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೬೧೮ ಸ್ತ್ರೀಶಕ್ತಿ ಕೇಂದ್ರಗಳಲ್ಲಿ ೯೫೬೦ (೨,೮೧೧ ಪ.ಜಾ. ಹಾಗೂ ೯೪೨ ಪ.ಪಂ.ದವರೂ ಸೇರಿ) ಸದಸ್ಯರಿದ್ದರು. ಈ ಸಂಘಗಳ ಒಟ್ಟು ಠೇವಣಿ ೨,೪೪,೪೮೦ ರೂ. ಆಗಿದ್ದು, ೪೧೯ ಸಂಘಗಳು ಆದಾಯೋತ್ಪನ್ನ ಚಟುವಟಿಯಾಗಿ ಕೈಗೊಂಡಿರುವ ಉತ್ಪಾದನಾ ಘಟಕಗಳಿಗಾಗಿ ೩.೬೫ ಲಕ್ಷ ರೂ. ಪ್ರೋತ್ಸಾಹಧನ ಪಡೆದಿದ್ದವು.

* * * *